ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೇ ಎಂಬ ಆದಾಯ ತೆರಿಗೆ ಇಲಾಖೆಯ ಪ್ರಶ್ನೆಗೆ ಪರಿಹಾರ ಒದಗಿಸುವುದಕ್ಕಾಗಿ ಸಂಯುಕ್ತ ಸಹಕಾರಿಯ ನಿಯೋಗದಿಂದ ಆದಾಯ ತೆರಿಗೆ ಇಲಾಖೆಯ ಮುಖ್ಯಸ್ಥರ ಭೇಟಿ ನೋಟೀಸ ನೀಡುವುದಕ್ಕೆ, ಟಿ.ಡಿ.ಎಸ್ ಕಡಿತ ಮಾಡಲು ಕ್ರಮ ನಿಲ್ಲಿಸಲು ಡಿಸೆಂಬರ ವರೆಗೆ ಅವಕಾಶ

ಆದಾಯ ತೆರಿಗೆ ಇಲಾಖಾ ಪ್ರಿನ್ಸಿಪಲ್ ಚೀಫ್ ಕಮೀಷನರ್ ಶ್ರೀ ಬಿ.ಆರ್.ಬಾಲಕೃಷ್ಣನ್ ಇವರನ್ನು ಭೇಟಿ ಮಾಡಿ ವಿವರಣೆ ನೀಡಿ ಮನವಿ ಸಲ್ಲಿಸಿರುವುದು.

ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಸೌಹಾರ್ದ ಸಹಕಾರಿಗಳ ನಿಯೋಗ.

ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಹಾಗೂ ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಜಮಖಂಡಿ, ಬಾಗಲಕೋಟ ಈ ಸೌಹಾರ್ದ ಸಹಕಾರಿಗಳಿಗೆ ಸಹಕಾರ ಸಂಘಗಳೇ ? ಎಂದು ಪ್ರಶ್ನಿಸಿ ಆದಾಯ ತೆರಿಗೆ ಇಲಾಖೆಯು ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಕಳೆದ ಹಲವು ದಿನಗಳಿಂದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯ ಟಿಡಿಎಸ್ ವಿಭಾಗದಿಂದ ನೋಟೀಸುಗಳು ಹಾಗೂ ದೂರವಾಣಿ ಕರೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ನಿಯೋಗವು ಆದಾಯ ತೆರಿಗೆ ಇಲಾಖೆಯ ಪ್ರಿನ್ಸಿಪಲ್ ಚೀಫ್ ಕಮೀಷನರ್ ಶ್ರೀ ಬಿ.ಆರ್.ಬಾಲಕೃಷ್ಣನ್, ಚೀಫ್ ಕಮೀಷನರ್ ಆಫ್ ಟಿಡಿಎಸ್ ಶ್ರೀ ದುಬೇ, ಪ್ರಿನ್ಸಿಪಲ್ ಕಮೀಷನರ್ ಆಫ್ ಇನ್‌ಕಮ್ ಟ್ಯಾಕ್ಸ್ ಶ್ರೀ ರಮೇಶ್ ಪ್ರಭಾತ್, ಪ್ರಿನ್ಸಿಪಲ್ ಡೈರೆಕ್ಟರ್ ಆಫ್ ಇನ್‌ಕಮ್‌ಟ್ಯಾಕ್ಸ್ ಶ್ರೀ ರವಿಚಂದ್ರನ್, ಅಡಿಷನಲ್ ಕಮೀಷನರ್ ಆಫ್ ಇನ್‌ಕಮ್‌ಟ್ಯಾಕ್ಸ್ ಶ್ರೀ ಪಿ.ಎಸ್. ಚಕ್ರಪಾಣಿ, ಪ್ರಿನ್ಸಿಪಲ್ ಕಮೀಷನರ್ ಆಫ್ ಟಿಡಿಎಸ್ ಶ್ರೀ ಸಂಜೀವ ಕುಮಾರ್ ಇವರುಗಳನ್ನು ಸಂಯುಕ್ತ ಸಹಕಾರಿಯ ನಿಯೋಗವು ಭೇಟಿ ಮಾಡಿ ಸೌಹಾರ್ದ ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿ, ಕರ್ನಾಟಕ ರಾಜ್ಯದಲ್ಲಿ ಎರಡು ಸಹಕಾರಿ ಕಾಯ್ದೆಗಳು ಕಾರ್ಯನಿರ್ವಹಿಸುತ್ತಿವೆ. ಈ ಎರಡು ಸಹಕಾರಿ ಕಾಯ್ದೆಗಳ ಉದ್ದೇಶಗಳು ಸಹ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ವ್ಯಕ್ತಿಗಳನ್ನು ಸದೃಢಗೊಳಿಸುವುದು ಹಾಗೂ ಸಮಾನ ಮನಸ್ಕ ಸದಸ್ಯರ ಆರ್ಥಿಕ ಅಭಿವೃದ್ಧಿಯನ್ನು ಬಲಪಡಿಸುವುದಾಗಿರುತ್ತದೆ ಎಂದು ವಿವರಿಸಿದರು.

ಈ ಪ್ರಕರಣಕ್ಕೆ ಪೂರಕವಾಗಿ, ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪ, ಐಎಎಸ್ ಇವರು ಸಹ ವಿವರಣೆಯನ್ನು ನೀಡಿರುತ್ತಾರೆ. ಅದರಂತೆ, ಆದಾಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಹಕಾರಿಗಳು ಮತ್ತು ಸಹಕಾರಿ ಸಂಘಗಳು ಒಂದೇ ಅರ್ಥವನ್ನು ನೀಡುತ್ತದೆ ಎಂದು ತಿಳಿಸಿರುತ್ತಾರೆ. ಈ ಮಾಡಿ ಟಿಡಿಎಸ್ ಕಡಿತ ಮಾಡುವ ಕುರಿತು ಮಾಹಿತಿಗಳನ್ನು ಒದಗಿಸುವಂತೆ ಸಹಕಾರಿಗಳಿಗೆ ಒತ್ತಾಯಿಸಬಾರದು ಎಂದು ಮನವಿ ಮಾಡಿದರು. ಇದಕ್ಕೆ ಪೂರಕವಾಗಿ ಧನಾತ್ಮಕವಾಗಿ ಸ್ಪಂದಿಸಿ ಮಾತನಾಡಿದ ಆದಾಯ ತೆರಿಗೆ ಇಲಾಖೆಯ ಉನ್ನತಾಧಿಕಾರಿಗಳು ಮಾನ್ಯ ಅಧ್ಯಕ್ಷರ ಮನವಿಗೆ ಒಪ್ಪಿಗೆ ಸೂಚಿಸಿದರು.

ಆದಾಯ ತೆರಿಗೆ ಅಧಿಕಾರಿಗಳು ಡಿಸೆಂಬರ 2018 ರವರೆಗೆ ಯಾವುದೇ ಕ್ರಮ ಜರುಗಿಸುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಈ ವಿಷಯದ ಬಗ್ಗೆ ಮಾಹಿತಿ ಇರದೇ ಕೆಲವು ಆದಾಯ ತೆರಿಗೆ ಅಧಿಕಾರಿಗಳು ಒಂದೆರಡು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ತಗಾದೆ ಮಾಡಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಾಗ ಅದರ ಬಗ್ಗೆ ತುರ್ತಾಗಿ ಮೇಲಾಧಿಕಾರಿಗಳೂಡನೆ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳಿಗೆ ನೀಡುತ್ತಿರುವ ನೋಟೀಸುಗಳನ್ನು ತಡೆಹಿಡಿಯಬೇಕು ಹಾಗೂ ಸಹಕಾರಿಗಳಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕು. ಸದಸ್ಯರ ಮಧ್ಯೆ ಆಗುವಂತಹ ವ್ಯವಹಾರಕ್ಕೆ ಟಿಡಿಎಸ್ ಅವಶ್ಯಕತೆ ಇರುವುದಿಲ್ಲ ಎಂದು ಕಾಯ್ದೆಯಲ್ಲಿ ತಿಳಿಸಿರುವುದರಿಂದ ಸಹಕಾರಿ ಸಂಘಗಳಿಗೆ ಇರುವ ಪ್ರಾವಧಾನವೇ ಸೌಹಾರ್ದ ಸಹಕಾರಿಗಳಿಗೂ ಅನ್ವಯಿಸುತ್ತದೆ. ಇದರಲ್ಲೇನಾದರೂ ತಮಗೆ ಸಂದೇಹವಿದ್ದಲ್ಲಿ ಸೂಕ್ತ ಪ್ರಾಧಿಕಾರದ ಮೂಲಕ ಸ್ಪಷ್ಟನೆಯನ್ನು ಒದಗಿಸಲಾಗುವುದು ಎಂದು ತಿಳಿಸಿ ಸಂಯುಕ್ತ ಸಹಕಾರಿಯು ವಿವರವಾದ ಮನವಿ ಪತ್ರವನ್ನು ಆದಾಯ ತೆರಿಗೆ ಇಲಾಖೆಯ ಪ್ರಿನ್ಸಿಪಲ್ ಚೀಫ್ ಕಮೀಷನರ್ ಶ್ರೀ ಬಿ.ಆರ್.ಬಾಲಕೃಷ್ಣನ್ ಇವರಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ್ ಹೆಗಡೆ, ಉಚ್ಚ ನ್ಯಾಯಾಲಯದ ವಕೀಲರಾದ ಶ್ರೀ ರವಿ ಶಂಕರ್, ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಂ.ಪಿ.ಮಂಜುನಾಥ್, ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಅಧ್ಯಕ್ಷರಾದ ಶ್ರೀ ವಿ.ಬಿ.ಪಾಟೀಲ್, ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಶ್ರೀ ವರುಣ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಮತ್ತು ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರಿ ನಿ., ಈ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಮಾತನಾಡಿ ಡಿಸೆಂಬರ್ 2018ರ ಅಂತ್ಯದವರೆಗೂ ಯಾವುದೇ ಸೌಹಾರ್ದ ಸಹಕಾರಿಗಳಿಗೆ ಈ ರೀತಿಯ ನೋಟೀಸುಗಳನ್ನು ನೀಡುವುದನ್ನು, ಸಹಕಾರಿಗಳಿಗೆ ಮಾಹಿತಿ ಕೇಳಿ ಭೇಟಿ ನೀಡುವುದನ್ನು ಮತ್ತು ದೂರವಾಣಿ ಕರೆ ಮಾತಾಡಿ ಅವರನ್ನು ಹಿಂದಕ್ಕೆ ಕರೆಯಿಸುವಂತೆ ಕ್ರಮವಿಡಲಾಗಿದೆ. ಹೀಗಾಗಿ ಯಾವುದಾದರೂ ಸೌಹಾರ್ದ ಸಹಕಾರಿಗಳಿಗೆ ಈ ರೀತಿ ಆದಾಯ ತೆರಿಗೆ ಅಧಿಕಾರಿಗಳು ಬಂದು ಮಾಹಿತಿ ಕೇಳಿದರೆ ತುರ್ತಾಗಿ ಸಂಯುಕ್ತ ಸಹಕಾರಿಯ ಗಮನಕ್ಕೆ ತರಬೇಕೆಂದು ಮನವಿ ಮಾಡಲಾಗುತ್ತಿದೆ. ಆದ್ದರಿಂದ, ಆದಾಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತುತ ಉಂಟಾಗಿರುವ ಸಮಸ್ಯೆ/ ಗೊಂದಲಗಳಿಗೆ ಸಹಕಾರಿಗಳು ಭಯಪಡದೇ ಇರಲು ಸಂಯುಕ್ತ ಸಹಕಾರಿಯು ಈ ಮೂಲಕ ತಿಳಿಸಿದೆ. ಸಂಯುಕ್ತ ಸಹಕಾರಿಯು ಇದಲ್ಲದೇ ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿ ಅಗತ್ಯ ಕ್ರಮವನ್ನು ಆದ್ಯತೆ ಮೇರೆಗೆ ನಿರ್ವಹಿಸುತ್ತಿದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.